**ಆಲೂರಿನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ**

ಸಿಸಿ ನಂ. 251/2020

| | | |
|---|---|---|
| ಸಾಕ್ಷಿಯ ಹೆಸರು | ರಂಗಸ್ವಾಮಿ | ಪಿ.ಡಬ್ಲ್ಯು -3 |
| ತಂದೆಯ ಹೆಸರು | ರಾಜಯ್ಯ | ಸಿ.ಡಬ್ಲ್ಯು -3 |
| ವಯಸ್ಸು | 38 ವರ್ಷ | |
| ಉದ್ಯೋಗ | ಗಾರೆ ಕೆಲಸ | ದಿನಾಂಕಃ 02-08-2024 |
| ವಾಸ | ಚಾಕನಹಳ್ಳಿ . | ಪ್ರಮಾಣ ವಚನ ಬೋಧಿಸಲಾಯಿತು. |

ಮುಖ್ಯ ವಿಚಾರಣೆಃ ಎಪಿಪಿ ರವರಿಂದ

ಚಾಸಾ-1ರವರು ನನ್ನ ಅಣ್ಣ. ಚಾಸಾ-2ರವರು ನನ್ನ ಹೆಂಡತಿ. ಚಾಸಾ-4ರವರು ನನ್ನ ತಾಯಿ.

ದಿಃ12-12-2019 ರಂದು ಬೆಳಿಗ್ಗೆ 10-30 ಗಂಟೆಯಲ್ಲಿ ಚಾಕನಹಳ್ಳಿ ಗ್ರಾಮದ ನಮ್ಮ ಮನೆಯ ಮುಂದನ ಜಗಲಿಯ ಮೇಲೆ ನಾನು , ಚಾಸಾ-1 , 2 ಮತ್ತು 4 ರವರು ಕುಳಿತಿದ್ದಾಗ ನಮ್ಮ ಮನೆಯ ಮುಂದೆ ರಸ್ತೆಯಲ್ಲಿ ಹೋಗುತ್ತಿದ್ದ ಜೆ ಸಿ ಬಿ ನಂಃ ಕೆಎ-46-ಎಂ-3760 ರ ಚಾಲಕ ಯಾವುದೇ ಸೂಚನೆಯನ್ನು ನೀಡದೇ ಒಮ್ಮೆಲೇ ನಮ್ಮ ಮನೆಗೆ ಜೆ ಸಿ ಬಿ ವಾಹನವನ್ನು ನುಗ್ಗಿಸಿದನು. ಆದ್ದರಿಂದ ನಮ್ಮ ಮನೆಯ ಜಗಲಿಯ ಮೇಲೆ ಕುಳಿತಿದ್ದ ಚಾಸಾ-1 ಮತ್ತು 2 ರವರಿಗೆ ಗಾಯಗಳಾದವು. ಚಾಸಾ-2ರವರ ಬಲಗಾಲು ಮುರಿದುಹೋಗಿದ್ದು , ಎಡಗಾಲಿಗೆ ತೀವ್ರ ಸ್ವರೂಪದ ರಕ್ತಗಾಯವುಂಟಾಗಿತ್ತು. ಹಾಗೂ ಮನೆಯ ಗೋಡೆ , ಆಸ್ಬರ್ ಶೀಟ್ ಗಳು ಜಖಂ ಗೊಂಡವು. ನಂತರ ನಾನು ಚಾಸಾ-2ರವರನ್ನು ಹಾಸನದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿರುತ್ತೇನೆ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ವೆನ್ ಲಾಕ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿರುತ್ತೇನೆ. ಜೆ ಸಿ ಬಿ ವಾಹನ ಡಿಕ್ಕಿಪಡಿಸಿದ್ದರಿಂದ ಮನೆಯ ಗೋಡೆ ಹಾಗೂ ಶೀಟ್ ಗಳು ಜಖಂ ಗೊಂಡಿದ್ದು , ಇದರಿಂದ ಅಂದಾಜು 20 ರಿಂದ 30 ಸಾವಿರ ರೂ.ಗಳ ನಷ್ಟ ಉಂಟಾಗಿರುತ್ತದೆ. ನಾನು ಪೋಲೀಸರಿಗೆ ಮೇಲಿನಂತೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ನಿಪಿ-4 ರಲ್ಲಿರುವ ವಾಹನದ ಪೋಟೋವನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ

ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುವುದಿಲ್ಲ.

( ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಸರ್ಕಾರಿ ವಕೀಲರು ಕೇಳಿರುತ್ತಾರೆ. ಸಾಕ್ಷಿಯ ಸಾಕ್ಷ್ಯವನ್ನು ಪರಿಶೀಲಿಸಿ ಪಾಟೀ ಸವಾಲು ಮಾಡಲು ಅವಶ್ಯಕವೆಂದು ಮನಗಂಡು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಎಪಿಪಿ ರವರಿಂದಃ-

ನಾನು ಪೋಲೀಸರ ಮುಂದೆ ಆರೋಪಿಯು ಅಜಾಗರೂಕತೆಯಿಂದ ಜೆ ಸಿ ಬಿ ಯನ್ನು ಹಿಂದಕ್ಕೆ ಚಾಲನೆ ಮಾಡಿದ್ದರಿಂದ ಅಪಘಾತವಾಗಿರುತ್ತದೆ ಎಂದು ಹೇಳಿರುತ್ತೇನೆ ಎಂದರೆ ಸರಿ . ನ್ಯಾಯಾಲಯದ ಮುಂದಿರುವ ಆರೋಪಿಯೇ ಅಪಘಾತ ದಿನದಂದು ಜೆ ಸಿ ಬಿ ಯನ್ನು ಚಾಲನೆ ಮಾಡುತ್ತಿದ್ದನು ಎಂದರೆ ಆ ದಿನ ಅಪಘಾತದಿಂದಾಗಿ ನಾವು ಗಾಬರಿಯಲ್ಲಿದ್ದುದರಿಂದ ನನಗೆ ಆರೋಪಿಯನ್ನು ಗುರುತಿಸುವುದು ಸಾಧ್ಯವಾಗಲಿಲ್ಲ ಎಂದು ನುಡಿಯುತ್ತಾರೆ. ಆರೋಪಿಯೇ ವಾಹನದ ಚಾಲಕನಾಗಿದ್ದು , ಆತನನ್ನು ನೋಡಿ ಗುರುತಿಸಿದ್ದರೂ ಸಹಾ ಆರೋಪಿಗೆ ಸಹಾಯ ಮಾಡಲು ಗುರುತಿಸಲು ಕಷ್ಟವಾಗುತ್ತಿದೆ ಎಂದು ನುಡಿಯುತ್ತಿದ್ದೇನೆ ಎಂದರೆ ಸಾಕ್ಷಿಯು ಆ ದಿನ ನಾನು ಗಾಬರಿಯಲ್ಲಿದ್ದ ಕಾರಣ ಆರೋಪಿಯನ್ನು ಸರಿಯಾಗಿ ಗಮನಿಸಲಿಲ್ಲ ಎಂದು ನುಡಿಯುತ್ತಾರೆ.

ಪಾಟೀ ಸವಾಲುಃ ಶ್ರೀ.ಬಿ.ಎಂ.ಜಿ. ಆರೋಪಿ ಪರ ವಕೀಲರಿಂದಃ

ಗಲಾಟೆಯ ದಿನ ನಮ್ಮ ಮನೆಯ ಬಳಿ ಚಾಸಾ-1,2 ಮತ್ತು 4 ರವರು ನಮ್ಮ ಮನೆಯ ಮುಂಭಾಗದ ಜಗಲಿಯ ಮೇಲೆ ಕುಳಿತಿದ್ದರು. ನಾನು ಮನೆಯ ಹಿಂಭಾಗದಲ್ಲಿ ಕೆಲಸ ಮಾಡುತ್ತಿದ್ದೆನು. ಪೂರ್ವ ದಿಕ್ಕಿಗೆ ನಮ್ಮ ಮನೆಯ ಬಾಗಿಲು ಇದೆ. ನಮ್ಮ ಮನೆಯ ಮುಂಭಾಗ ಉತ್ತರ ದಕ್ಷಿಣವಾಗಿ 8 ಅಡಿ ಅಗಲದ ಕಾಂಕ್ರೀಟ್ ರಸ್ತೆ ಇದೆ. ನಮ್ಮ ಮನೆಗೂ , ಚರಂಡಿಗೂ 8 ಅಡಿ ದೂರವಿದೆ. ರಸ್ತೆಯ ಪಕ್ಕದಲ್ಲಿಯೇ ಚರಂಡಿ ಇದೆ ಎಂದರೆ ಸರಿ . ನಮ್ಮ ಮನೆಯ ಬಾಗಿಲಿನ ಎಡಭಾಗಕ್ಕೆ ಇದ್ದಂತಹ ಜಗಲಿಯ ಮೇಲೆ ಚಾಸಾ-1,2 ಮತ್ತು 4 ರವರು ಕುಳಿಸಿದ್ದರು. ಮೊದಲು ಚಾಸಾ-1 ರವರು ಕುಳಿತಿದ್ದರು, ನಂತರ ನನ್ನ ಅಣ್ಣ , ಆನಂತರ ನನ್ನ ಹೆಂಡತಿ ಶೋಭಾ ಕುಳಿತಿದ್ದರು. ಜೆ ಸಿ ಬಿ ಯು ಯಾವ ದಿಕ್ಕಿನಿಂದ ಬಂದಿತ್ತು ಎಂದು ನನಗೆ ಗೊತ್ತಿಲ್ಲ. ನಾನು

ಬರುವಷ್ಟರಲ್ಲಿ ಅಪಘಾತವಾಗಿತ್ತು ನಾನು ನೋಡಿರುವುದಿಲ್ಲ ಎಂದರೆ ಸಾಕ್ಷಿಯು ನಾನು ಅಪಘಾತವನ್ನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಪೂರ್ವದಿಂದ ಪಶ್ಚಿಮಕ್ಕೆ ಬಂದು ಜೆ ಸಿ ಬಿ ಅಪಘಾತಪಡಿಸಿರುತ್ತದೆ . ಆ ದಿನ ಆರೋಪಿಯು ಜೆ ಸಿ ಬಿ ಯನ್ನು ಮುಂಭಾಗದಿಂದ ಓಡಿಸಿಕೊಂಡು ಬಂದನಾ ಎಂದರೆ ಸಾಕ್ಷಿಯು ಹಿಂಬದಿಯಿಂದ ಓಡಿಸಿಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ಮನೆಯ ಮುಂಭಾಗದಲ್ಲಿರುವ ಕಾಂಕ್ರೀಟ್ ರಸ್ತೆಯಲ್ಲಿ ಬಟ್ಟೆ ಮತ್ತು ಪಾತ್ರೆ ತೊಳೆಯುತ್ತಾರೆ ಎಂದರೆ ಸರಿ . ಚಾಸಾ-1 ರವರು ನನ್ನ ಅಣ್ಣ. ನನ್ನ ಅಣ್ಣ ರವಿಯ ಮನೆಗೂ ನನ್ನ ಮನೆಗೂ 1 ಕಿ ಮೀ. ಅಂತರವಿದೆ. ಹೊಸದಾಗಿ ಮಾಡಿದಂತಹ ಕಾಂಕ್ರೀಟ್ ರಸ್ತೆಯ ಎರಡೂ ಬದಿಗಳಲ್ಲಿಯೂ ಮನೆಗಳಿವೆ ಎಂದರೆ ಸರಿ . ಜೆ ಸಿ ಬಿ ಹಿಂಭಾಗದಿಂದ ಬಂದಿತ್ತು ಎಂದು ಹೇಳಿದಾಗ ನಾನು ನಮ್ಮ ಮನೆಯ ಹಿಂಭಾಗದಲ್ಲಿದ್ದೆನು. ಗಾಯಾಳುಗಳನ್ನು ನಾನೇ ಆಸ್ಪತ್ರೆಗೆ ಕರೆದುಕೊಂಡು ಹೋದೆನು. ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ವೆನ್ ಲಾಕ್ ಆಸ್ಪತ್ರೆಗೆ ನಾನೇ ಕರೆದುಕೊಂಡು ಹೋದೆನು. ಮಂಗಳೂರಿನಲ್ಲಿ 4 ತಿಂಗಳವರೆಗೆ ಚಿಕಿತ್ಸೆ ಕೊಡಿಸಿದೆನು. ಡಿಸೆಂಬರ್-12 ರಂದು ಬೆಳಿಗ್ಗೆ 10-30 ರ ಸಮಯದಲ್ಲಿ ನಮ್ಮ ಮನೆಯ ಬಳಿಯೇ ಪೋಲೀಸರಿಗೆ ಹೇಳಿಕೆ ನೀಡಿದೆನು. ನಮ್ಮ ಮನೆಯು ಸುಮಾರು 15 ವರ್ಷದ ಹಳೆಯ ಮನೆ . ಕೊಟ್ಟಿಗೆ ಸಾಲಕ್ಕಾಗಿ ನಾನು ಗ್ರಾಮಪಂಚಾಯಿತಿಗೆ ಅರ್ಜಿ ಸಲ್ಲಿಸಿದ್ದೆನು ಎಂದರೆ ಸರಿ . ಆ ದಿನ ಚಾಸಾ-2 ರವರು ನಮ್ಮ ಮನೆಯ ಮುಂಭಾಗದ ರಸ್ತೆಯಲ್ಲಿ ಪಾತ್ರೆ ತೊಳೆಯುತ್ತಿದ್ದರು ಎಂದರೆ ಸಾಕ್ಷಿಯು ಜಗಲಿಯ ಮೇಲೆ ಕುಳಿತಿದ್ದರು ಎಂದು ನುಡಿಯುತ್ತಾರೆ. ಜೆ ಸಿ ಬಿ ಬರುತ್ತಿದ್ದಾಗ ಚಾಲಕ ಮುನ್ಸೂಚನೆ ನೀಡಿದರೂ ಸಹಾ ಅದನ್ನು ಗಮನಿಸದೆ ಏಕಾ ಏಕಿ ಚಾಸಾ-2ರವರು ಪಾತ್ರೆ ಬಟ್ಟೆಗಳನ್ನು ತೆಗೆದುಕೊಳ್ಳಲು ಹೋಗಿ ಅವರ ನಿರ್ಲಕ್ಷತನದಿಂದಲೇ ಅಪಘಾತಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿದು ಚಾಲಕನ ನಿರ್ಲಕ್ಷತನದಿಂದಅ ಪಘಾತವಾಗಿರುತ್ತದೆ ಎಂದು ನುಡಿಯುತ್ತಾರೆ.

ಚಾಸಾ-1 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳುಂಟಾಗಿದ್ದವು , ಚಾಸಾ-2 ರವರಿಗೆ ತೀವ್ರ ಸ್ವರೂಪದ ಗಾಯಗಳಾಗಿದ್ದು , ಇತರರಿಗೆ ಯಾವುದೇ ಗಾಯಗಳಾಗಿರುವುದಿಲ್ಲ. ಚಾಸಾ-1 ರವರು ಬೇರೆ ಕಡೆ ಗಾಯವನ್ನುಂಟುಮಾಡಿಕೊಂಡಿದ್ದರೂ ಸಹಾ ಜೆ ಸಿ ಬಿ ಯಿಂದ ಅಪಘಾತವಾಗಿ

ಗಾಯವನ್ನುಂಟುಮಾಡಿಕೊಂಡಿರುತ್ತಾರೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದು ವೇಳೆ ಜಗಲಿಯ ಮೇಲೆ ಅಪಘಾತವಾಗಿದ್ದಲ್ಲಿ ನಿಮ್ಮ ತಾಯಿಗೂ ಕೂಡ ಏಟಾಗುತ್ತಿತ್ತು , ಆದ್ದರಿಂದ ನಿಮ್ಮ ಜಗಲಿಗಾಗಲೀ ಮನೆಗಾಗಲೀ ಯಾವುದೇ ಜಖಂ ಗಳಾಗದ ಕಾರಣ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕೊಟ್ಟಿಗೆ ಪರಿಹಾರ ಪಡೆಯಲು ಅರ್ಜಿ ಸಲ್ಲಿಸಿದ್ದ ಕಾರಣ ನಾವೇ ಸ್ವತಃ ಶೀಟುಗಳನ್ನು ಒಡೆದುಹಾಕಿ ನಷ್ಟ ಉಂಟಾಗಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಲಕನ ನಿರ್ಲಕ್ಷತನದಿಂದ ಅಪಘಾತವಾಗದಿದ್ದರೂ ಸಹಾ , ಚಾಸಾ-2ರವರ ನಿರ್ಲಕ್ಷತನದಿಂದಲೇ ಅಪಘಾತ ಉಂಟಾಗಿದ್ದು , ಯಾವುದೇ ಪ್ರಕರಣವನ್ನು ನಾವು ಸಲ್ಲಿಸುವುದಿಲ್ಲ ಎಂದು ಹೇಳಿದ ಮೇರೆಗೆ ಮಾನವೀಯತೆಯ ದೃಷ್ಟಿಯಿಂದ ಜೆ ಸಿ ಬಿ ಮಾಲೀಕರು 50 ಸಾವಿರ ರೂ.ಗಳನ್ನು ಚಿಕಿತ್ಸಾ ವೆಚ್ಚವಾಗಿ ಚಾಸಾ-2ರವರಿಗೆ ನೀಡಿದ್ದರು ಎಂದರೆ ಸರಿಯಲ್ಲ. ಊರಿನ ಗ್ರಾಮಸ್ಥರು ನ್ಯಾಯ ತೀರ್ಮಾನ ಮಾಡಿ ಪರಿಹಾರದ ಮೊತ್ತವನ್ನು ಕೊಡಿಸಿದ್ದರು ಎಂದರೆ ಸರಿಯಲ್ಲ. ಚಾಸಾ-1 ಮತ್ತು 2 ರವರು ಪರಿಹಾರ ಕೋರಿ ಹಾಸನದ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ . ಪರಿಹಾರವನ್ನು ಪಡೆದುಕೊಳ್ಳುವ ಕಾರಣಕ್ಕಾಗಿ ಆರೋಪಿಯ ವಿರುದ್ದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅಪಘಾತವಾದ ಸ್ಥಳದಲ್ಲಿ ಇರಲಿಲ್ಲ ಹಾಗೂ ಅಪಘಾತವನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಪೋಲೀಸರಿಗೆ ನಾನು ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ನಿರ್ಲಕ್ಷತನದಿಂದ ಅಪಘಾತವಾಗಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಆಲೂರು.